ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 1993 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಭೀಮಣ್ಣ ಖಂಡ್ರೆ : (ಸಾರಿಗೆ ಸಚಿವರು) :- ಮಾನ್ಯ ಅಧ್ಯಕ್ಷರೇ, 1993ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ "1993ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :- ಮಾನ್ಯ ಅಧ್ಯಕ್ಷರೆ, 1993ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ - I

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ 1993

ಶ್ರೀ ಎನ್‌ಬಿ. ಫಾಲಪ್ಪ :- (ಪರಿಸರ ವಿಜ್ಞಾನ, ತಂತ್ರಜ್ಞಾನ, ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೆ, ಮಲೆನಾಡು ಪ್ರದೇಶಾಬಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ 1993ನ್ನು ಮಂಡಿಸಲು ಅನುಮತಿಯನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ 'ಏನೆಂದರೆ' 1993ನೇ ಸಾಲಿನ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿಯನ್ನು ನೀಡಲಾಯಿತು

ಶ್ರೀ ಎನ್.ಬಿ. ಹಾಲಪ್ಪ :- ಮಾನ್ಯ ಅಧ್ಯಕ್ಷರೆ, 1993ನೇ ಸಾಲಿನ ಕರ್ನಾಟಕ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ಅನುಬಂಧ - II ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ಎಂ.ವೈ. ಘೋರ್ಪಡೆ :- (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) ಮಾನ್ಯ ಅಧ್ಯಕ್ಷರೆ, 1993ನೇ ಸಾಲಿನ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡಬೇಕೆಂದು ಕೋರುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) :- ಸಪ್ಲಿಮೆಂಟರಿ ಅಜೆಂಡಾ ಇಷ್ಯೂ ಮಾಡಿ ಆಮೇಲೆ ಮಂಡನೆ ಮಾಡಿ. ಬ್ಯಾಡ್ precedent ಕ್ರಿಯೇಟ್ ಮಾಡಬಾರದು. ನಾನು ಆ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು :- ಆಯಿತು.

ಶ್ರೀ ವೈ.ಕೆ. ರಾಮಯ್ಯ :- ಈ ಮಸೂದೆಯನ್ನು ತರಬೇಕೆಂದು ನಾವೇ ಒತ್ತಾಯ ಮಾಡುತ್ತಿದ್ದೇವೆ.

ಅಜೆಂಡಾದಲ್ಲಿ ಇಲ್ಲದಿದ್ದರೂ ಪರವಾಗಿಲ್ಲ ಮಂಡನೆ ಮಾಡಬಹುದು. ಇದನ್ನು ತರಬೇಕೆಂದು ನಾವೇ ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಎಂ. ವೈ. ಘೋರ್ಪಡೆ :- ಮಧ್ಯಾಹ್ನ ಮಾಡಬಹುದು. ಪ್ರಿಂಟ್ ಆಗಿ ಈಗ ತಾನೇ ಬಂದಿದೆ. ಆ ಕಾರಣ ಬೆಳಗಿನ ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ :- ನಾನು ರೂಲ್ಸ್ ಹೇಳಿದೆ. ಮಂಡಿಸಬೇಡಿಯೆಂದು ಹೇಳಲಿಲ್ಲ. ಇವತ್ತು ಪದ್ಧತಿ ಇದೆ. ಅಜೆಂಡಾದಲ್ಲಿ ಇಲ್ಲದಿದ್ದರೆ ಒಂದು ಸಪ್ಲಿಮೆಂಟರಿ ಅಜೆಂಡಾ ಬರಬೇಕಾಗುತ್ತದೆ. There is a procedure. Before introduction, there has to be a supplementary agenda.

ಶ್ರೀ ಸಿ. ಬೈರೇಗೌಡ :- ಅಧ್ಯಕ್ಷರು ಅಪ್ಪಣೆ ಕೊಡುವುದಾದರೆ ಹಾಗೂ ಈ ಸದನ ಅದನ್ನು ಒಪ್ಪುವುದಾದರೆ ಅದನ್ನು ಮಂಡಿಸುವುದರಲ್ಲಿ ಅಭ್ಯಂತರ ಇಲ್ಲ.

ಅಧ್ಯಕ್ಷರು :- ಮಧ್ಯಾಹ್ನ ತೆಗೆದುಕೊಳ್ಳೋಣ.

ನಿಲುವಳಿ ಸೂಚನೆ

ವಿಷಯ :- ಗೃಹಮಂಡಳಿಯ ಮೂಲಕ ಆಶ್ರಯ ಯೋಜನೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿ ಪುರ) :- ಮಾನ್ಯ ಅಧ್ಯಕ್ಷರೇ, ನಾನು ಮತ್ತು ಈಶ್ವರಪ್ಪನವರು ನಿಲುವಳಿ ಸೂಚನೆಯನ್ನು ಒಂದು ಪ್ರಾಮುಖ್ಯವಾದಂಥ ವಿಚಾರವನ್ನು ಪ್ರಸ್ತಾಪ ಮಾಡಬೇಕು ಎಂದು ಹೇಳಿ ಕಳುಹಿಸಿಕೊಟ್ಟಿದ್ದೇವೆ. ತಾವು ಶೂನ್ಯವೇಳೆಯಾದಮೇಲೆ, ಕಾಗದಪತ್ರಗಳನ್ನು ಮಂಡಿಸಿಯಾದ ಮೇಲೆ ಮಂಡಿಸಬಹುದು ಎಂದು ಅಪ್ಪಣೆ ಕೊಟ್ಟಿದ್ದೀರಿ. ಇಲ್ಲಿರುವಂಥ ಸದಸ್ಯರಿಗೆ ಒಂದುರೀತಿ ಗಾಬರಿ ತರುವಂಥ ಕೆಲವು ಸಂಗತಿಗಳು ಪತ್ರಿಕೆಗಳಲ್ಲಿ ಬಂದಿವೆ. ಯಾವ ಗೃಹಮಂಡಳಿ ಮೂಲಕ ಆಶ್ರಯ ಯೋಜನೆಯಲ್ಲಿ ಮನೆಗಳನ್ನು ಕಟ್ಟುವುದಕ್ಕೆ ರಾಜ್ಯಾದ್ಯಂತ ನಾವು ಕೊಟ್ಟಿದ್ದವು, ಆ ಸಂದರ್ಭದಲ್ಲಿ ಕೆಲವು ಅವ್ಯವಹಾರಗಳು ನಡೆದಿದೆ ಎಂದು ಸರ್ಕಾರಕ್ಕೆ ಅನ್ನಿಸಿ ಇಲ್ಲಿ ಸದನದಲ್ಲಿ ಚರ್ಚೆಯಾಗಿ ಸಿ.ಓ.ಡಿ. ತನಿಖೆಗೆ ವಹಿಸಿಕೊಡಲಾಗಿತ್ತು. ಸಿ.ಓ.ಡಿ. ಯವರು ಈ ಒಂದು ತನಿಖೆಯನ್ನು ಮಾಡಿದಂಥ ಸಂದರ್ಭದಲ್ಲಿ ಇಂಟರಿಮ್ ರಿಪೋರ್ಟನ್ನು ತಮ್ಮ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಆ ಸಂದರ್ಭದಲ್ಲಿ ನಿನ್ನೆ ಮತ್ತು ಇವತ್ತು ಎಲ್ಲಾ ಪತ್ರಿಕೆಗಳಲ್ಲಿ ಮುಖಪುಟದಲ್ಲಿ ಒಂದು ಈ ಸಂಗತಿ ಬಂದಿದೆ. ಅದರಲ್ಲಿ ವಿಧಾನಸಭಾ ಕ್ಷೇತ್ರಗಳಲ್ಲಿ ಆಶ್ರಯ ಯೋಜನೆಯಲ್ಲಿ ಬೆಳಗಾವಿ ಜಿಲ್ಲೆಯ ಒಂಭತ್ತು ತಾಲ್ಲೂಕುಗಳಲ್ಲಿ ಏನು ಮನೆಗಳನ್ನು ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟಿತ್ತು. ಆ ಸಂದರ್ಭದಲ್ಲಿ ಪತ್ರಿಕೆಯಲ್ಲಿ ಬಂದಿರುವಂಥಾದ್ದು ಆ ಒಂದು ಗೃಹಮಂಡಳಿಯ ಮನೆಗಳನ್ನು ಕಟ್ಟಬೇಕೆಂದು ಹೇಳಿ ಕೊಟ್ಟಂಥ ಮಹಮದ್‌ಸೇಠ್ ಎನ್ನುವ ಕಂಟ್ರಾಕ್ಟರ್ ಅವರು ಸಿ.ಓ.ಡಿ.ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ಗೃಹಮಂಡಳಿಯು ನನಗೆ ಕೊಟ್ಟಂಥ 61 ಲಕ್ಷ 40 ಸಾವಿರ ರೂಪಾಯಿಗಳಲ್ಲಿ ಎರಡುಲಕ್ಷ ರೂಪಾಯಿಗಳನ್ನು ''ಗೃಹಮಂಡಳಿ ಅಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪನವರಿಗೆ, ಹಣಕಾಸಿನ ನಿಯಂತ್ರಕ ಸದಾಶಿವ ಅವರಿಗೆ 40 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇನೆ ಎನ್ನುವಂಥಾದ್ದು ಒಂದು ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಕೆ.ಹೆಚ್.ರಂಗನಾಥ್ :- ಅವರು ಎಲ್ಲವನ್ನೂ ಪ್ರಸ್ತಾಪ ಮಾಡುತ್ತಿದ್ದಾರೆ. ನಾನು ಅವರ ನೋಟೀಸನ್ನು ಕೂಡ ನೋಡಿದೆ. ಅವರ ನೋಟೀಸಿನಲ್ಲಿ ಮೇಲ್ಗಡೆ ಸುಮ್ಮನೆ ಬರೆದುಬಿಟ್ಟಿದ್ದಾರೆ 'ನಿಲುವಳಿ ಸೂಚನೆ' ಎಂದು.